# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ), ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರಿಸುವ ಕುರಿತು.

**ಪ್ರಶ್ನೆ:**

ದಿನಾಂಕ:15.03.2025 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಕಲಬುರಗಿ ನಗರದಲ್ಲಿನ ವಿವಿಧ ಸ್ಥಳಗಳಲ್ಲಿ ನಿರಂತರ ನೀರು ಪೂರೈಸುವ ಯೋಜನೆಯಡಿಯಲ್ಲಿ ನೂರಾರು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಎಲ್ಲಾ ಕಾಮಗಾರಿಗಳನ್ನು ಎಲ್ ಅಂಡ್ ಟಿ ಕಂಪನಿಯವರಿಗೆ ವಹಿಸಲಾಗಿದೆ. ಆದರೆ ಸದರಿ ಕಂಪನಿಯವರು ನಗರದ ತುಂಬೆಲ್ಲಾ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಅರ್ಧಂಬರ್ಧ ಕೆಲಸ ಮಾಡಿ ನಗರದಲ್ಲಿನ ಮೂಲಸೌಕರ್ಯಕ್ಕೆ ಅಡ್ಡಿಯನ್ನುಂಟು ಮಾಡಿದ್ದಾರೆ.

ವಿಶೇಷವಾಗಿ ಯಾವಾಗಲು ಹೆಚ್ಚಾಗಿ ವಾಹನ ದಟ್ಟಣೆಯಿಂದ ಕೂಡಿರುವ ನಗರದ ವೆಂಕಟೇಶ ನಗರದ ವಿದ್ಯಾನಿಕೇತನ ಶಾಲೆಯ ಹಿಂಬದಿಯಲ್ಲಿರುವ ಉದ್ಯಮಿ ಸಂತೋಷ ವರ್ಗೀಸ್ ಅವರ ಮನೆಯ ಬಳಿ ಕಂಪನಿಯವರು ತಿಂಗಳ ಹಿಂದೆ-ಸಿಮೆಂಟ್ ರಸ್ತೆಯನ್ನು ಅಗೆದು ಪೈಪ್‌ಲೈನ್ ಅಳವಡಿಸಿದ್ದರು. ಪೈಪ್‌ಲೈನ್ ಅಳವಡಿಕೆ ಸಂದರ್ಭದಲ್ಲಿ ಈ ಮುಂಚೆಯೇ ಇದ್ದ ಪೈಪ್ ಒಂದು ಒಡೆದಿದ್ದರಿಂದ ಸುತ್ತಮುತ್ತಿಲಿನ ಮನೆಗಳ ಎದುರಿನ ಚರಂಡಿಗೆ ನೀರು ನುಗ್ಗಿದ್ದು, ಸಾರ್ವಜನಿಕರು ಸಂಚರಿಸದಷ್ಟು ದುರ್ಗಂಧ ಬೀರುತ್ತಿದೆ. ಈ ಬಗ್ಗೆ 15 ದಿನಗಳ ಹಿಂದೆಯೇ ಎಲ್ ಅಂಡ್ ಟಿ ಕಂಪನಿಯ ಮೇಲುಸ್ತುವಾರಿಗೆ ತಿಳಿಸಿ ಸರಿಪಡಿಸುವಂತೆ ಬಡಾವಣೆ ನಿವಾಸಿಗಳು ಒತ್ತಾಯಿಸಿದ್ದರು ಕೂಡ ಯಾವುದೇ ಕ್ರಮ ಕೈಗೊಳ್ಳದೇ ಬೇಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿದ್ದಾರೆ.

ಇದೆ ಮಾರ್ಚ್-15 ರಂದು ಬೆಳಿಗ್ಗೆ ಸ್ಥಳಕ್ಕೆ ಬಂದ ಎಲ್ ಅಂಡ್ ಟಿ ಕಂಪನಿಯ ಎಂಜಿನಿಯರ್‌ಗಳು ಹಾಗೂ ಸಿಬ್ಬಂದಿ ತಾವು ಪೈಪ್‌ಲೈನ್ ಹಾಕಿದ್ದ ಗುಂಡಿಯನ್ನು ತೋಡಿದರು. ಈ ಸಂದರ್ಭದಲ್ಲಿ ವರ್ಗೀಸ್ ಅವರ ಮನೆ ಎದುರಿನ ತೆರೆದ ಚರಂಡಿಯಲ್ಲಿನ ನೀರಿನ ಮೂಲವನ್ನು ಪತ್ತೆ ಹಚ್ಚುವಂತೆ ನಿವಾಸಿಗಳು ಮನವಿ ಮಾಡಿದರೂ ಅದಕ್ಕೂ ತಮಗೂ ಸಂಬಂದವೇ ಇಲ್ಲ ಎಂಬಂತೆ ಅಲ್ಲಿಂದ ತೆರಳಿದ್ದಾರೆ.

ಇದರಂತೆ ನಗರದ ತುಂಬೆಲ್ಲಾ ನೂರಾರು ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವ ಈ ಕಂಪನಿಯು ಎಲ್ಲಾ ಕಾಮಗಾರಿಗಳನ್ನ ಹೀಗೆಯೇ ಅರ್ಧಂಬರ್ಧ ಮಾಡಿ ಈಗಾಗಲೇ ಇರುವ ಒಳಚರಂಡಿ ಹಾಗೂ ನೀರಿನ ಮೂಲಸೌಕರ್ಯಗಳನ್ನು ಹಾಳು ಮಾಡುತ್ತಿದ್ದಾರೆ. ಈ ಬಗ್ಗೆ ಸ್ಥಳೀಯ ಶಾಸಕರುಗಳು ಸಹ ವಿಚಾರಿಸಿದ್ದರೂ ಕೂಡ ಅವರ ಮಾತಿಗೂ ಕ್ಯಾರೆ ಎನ್ನದಂತೆ ವರ್ತಿಸುತ್ತಿದ್ದಾರೆ.

ಆದ್ದರಿಂದ, ಇದೊಂದು ಕಲಬುರಗಿ ನಗರದ ವಿವಿಧ ಸ್ಥಳಗಳಲ್ಲಿನ ಸಾರ್ವಜನಿಕರ ಮೂಲಸೌಕರ್ಯದ ವಿಷಯವಾಗಿರುವುದರಿಂದ ಈ ಬಗ್ಗೆ ಶೀಘ್ರವಾಗಿ ಪರಿಶೀಲಿಸಿ ಕಂಪನಿಯ ಮೇಲೆ ಸೂಕ್ತ ಕ್ರಮ ಕೈಗೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿರ್ದೇಶಿಸುವಂತೆ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

ಉತ್ತರ :

ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಕಲಬುರಗಿ ನಗರಕ್ಕೆ ನಿರಂತರ 24x7 ಕುಡಿಯುವ ನೀರು ಸರಬರಾಜು ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 279 ಪಿಆರ್‌ಜೆ 2018, ದಿನಾಂಕ:22/10/2018 ರಲ್ಲಿ Design Build Operate & Transfer (DBOT) ಮಾದರಿಯಲ್ಲಿ ಕೈಗೊಳ್ಳಲು ಆದೇಶವಿರುತ್ತದೆ. ಮೆ||ಎಲ್&ಟಿ, ಚೆನ್ನೈ ರವರಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 96 ಪಿಆರ್‌ಜೆ 2020, ದಿನಾಂಕ:26/03/2020 ರಲ್ಲಿ ರೂ.837.43 ಕೋಟಿಗಳಿಗೆ (ಯೋಜನೆಯ ನಿರ್ಮಾಣ ಮೊತ್ತ ರೂ.604.95 ಕೋಟಿ ಮತ್ತು ಕಾರ್ಯಚರಣೆ & ನಿರ್ವಹಣೆ ಮೊತ್ತ ರೂ.232.48 ಕೋಟಿ) ಗುತ್ತಿಗೆ ನೀಡಲಾಗಿದೆ.

ಕರಾರಿನನ್ವಯ ನಿರ್ಮಾಣ ಕಾಮಗಾರಿಯನ್ನು ದಿನಾಂಕ:09/06/2025 ರಂದು ಪೂರ್ಣಗೊಳಿಸಬೇಕಾಗಿರುತ್ತದೆ.

ಕಲಬುರಗಿ ನಗರದಲ್ಲಿ ಇದುವರೆಗೆ ಭೌತಿಕವಾಗಿ ಶೇ.50% ಪ್ರಗತಿ ಸಾಧಿಸಲಾಗಿದೆ. ಆರ್ಥಿಕವಾಗಿ ರೂ.152.84 ಕೋಟಿ ವೆಚ್ಚ ಮಾಡಲಾಗಿದೆ.

24x7 ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಹಾಲಿ ಇರುವ ಕುಡಿಯುವ ನೀರು ಸರಬರಾಜು ಸಾಮರ್ಥ್ಯವನ್ನು ಪರಿಗಣಿಸಿ ಉಳಿದ ಹೆಚ್ಚುವರಿ ಬೇಕಾಗುವ ಕುಡಿಯುವ ನೀರನ್ನು ಬೆಣ್ಣೆತೋರ ಜಲಾಶಯದಿಂದ ಪಡೆಯಲು ಉದ್ದೇಶಿಸಿದೆ.

ಯೋಜನೆಯಲ್ಲಿ ರೂಪಿಸಿರುವಂತೆ ಕಲಬುರಗಿ ನಗರದ ವಿವಿಧ ಬಡಾವಣೆಗಳಲ್ಲಿ ವಿತರಣಾ ಜಾಲವನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. ವಿತರಣಾ ಜಾಲ ಅಳವಡಿಸುವಾಗ ಹಾಲಿ ಇರುವ ಕುಡಿಯುವ ನೀರು ಕೊಳವೆ ಅಥವಾ ಒಳಚರಂಡಿ ಕೊಳವೆಯನ್ನು ಗುತ್ತಿಗೆದಾರರು ಹಾಳು ಮಾಡಿದಲ್ಲಿ ಸದರಿ ಕೊಳವೆಯನ್ನು ಸರಿಪಡಿಸುವ ಜವಾಬ್ದಾರಿ ಗುತ್ತಿಗೆದಾರರದ್ದಾಗಿರುತ್ತದೆ.

ಮಾನ್ಯ ಸದಸ್ಯರು ಪ್ರಸ್ತಾಪಿಸಿರುವಂತೆ ವೆಂಕಟೇಶ ನಗರದ ವಿದ್ಯಾನಿಕೇತನ್ ಶಾಲೆಯ ಹಿಂಬದಿಯಲ್ಲಿರುವ ಉದ್ಯಮಿ ಶ್ರೀ ಸಂತೋಷ ವರ್ಗೀಸ್ ಅವರ ಮನೆಯ ಬಳಿ ಮೆ||ಎಲ್ ಅಂಡ್ ಟಿ ಕಂಪನಿಯವರು 10 ದಿನದ ಹಿಂದೆ ಸಿಮೆಂಟ್ ರಸ್ತೆಯನ್ನು ಕತ್ತರಿಸಿ ಕುಡಿಯುವ ನೀರಿನ ಕೊಳವೆ ಮಾರ್ಗವನ್ನು ಅಳವಡಿಸಿರುತ್ತಾರೆ.

ಕೊಳವೆ ಮಾರ್ಗ ಅಳವಡಿಸುವಾಗ ಒಳಚರಂಡಿ ಕೊಳವೆಯನ್ನು ಹಾನಿ ಮಾಡಿರುತ್ತಾರೆ ಹಾಗೂ ಸದರಿ ಹಾನಿಗೊಳಗಾದ ಕೊಳವೆಯನ್ನು ದುರಸ್ತಿ ಪಡಿಸಿರುತ್ತಾರೆ.

ಆದಾಗ್ಯೂ ಉದ್ಯಮಿ ಸಂತೋಷ ವರ್ಗೀಸ್ ರವರ ಮನೆಯ ಹತ್ತಿರ ಇರುವ ಮಳೆ ನೀರಿನ ಚರಂಡಿಯಲ್ಲಿ ಕೊಳಚೆ ನೀರು ಒಂದು ವಾರದಿಂದ ಹರಿಯುತ್ತಿರುವುದು ತಿಳಿದು ಬಂದಿದ್ದು, ಸದರಿ ಮಳೆ ನೀರಿನ ಚರಂಡಿಯಲ್ಲಿ ಕೊಳಚೆ ನೀರು ಹರಿದು ಬರುತ್ತಿರುವ ಮೂಲವನ್ನು ನಗರ ಪಾಲಿಕೆಯವರು ಹುಡುಕಿ ಎರಡು ದಿನದೊಳಗೆ ಸರಿಪಡಿಸಲು ಸೂಚಿಸಲಾಗಿದೆ.

ಒಟ್ಟಾರೆ ಯೋಜನೆಯಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ವಿಳಂಬವಾಗಿರುವುದಕ್ಕೆ ಕರಾರಿನ ನಿಯಮಾನುಸಾರ ದಂಡವನ್ನು ವಿಧಿಸಲಾಗಿದೆ. ಇದೂವರೆಗೆ ರೂ 20.20 ಕೋಟಿ ದಂಡವನ್ನು ವಸೂಲಿ ಮಾಡಲಾಗಿದೆ.

ಯೋಜನೆಯಲ್ಲಿ ನಿಗಧಿಪಡಿಸಿರುವ ಅಂಶಗಳನ್ನೊಳಗೊಂಡಂತೆ ಎಲ್ಲಾ ಕಾಮಗಾರಿಗಳ ಗುಣಮಟ್ಟ ಕಾಯ್ದಿರಿಸಿಕೊಂಡು ಸಾರ್ವಜನಿಕರಿಗೆ ಯಾವುದೇ ಅನಾನುಕೂಲವಾಗದಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕಡತ ಸಂಖ್ಯೆ: ನಅಇ 70 ಪಿ.ಆರ್.ಜೆ 2025

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು.